ಪೆರೇಡಿನಲ್ಲಿ ಗೋವಾದ ಆಗಿನ ಮುಖ್ಯಮಂತ್ರಿ ದಯಾನಂದ ಬಾಂದೋಡ್ಕರ್ ಅವರ ಹಸ್ತದಿಂದ ಬಹುಮಾನ ಪಡೆಯುವ ಅವಕಾಶ ಸಿಕ್ಕಿತು. ನಂತರ ಇವರನ್ನು ಕೆಪೆ ಠಾಣೆಗೆ ವರ್ಗಾಯಿಸಲಾಯಿತು.

ಶಿಕ್ಷಣದಿಂದ ವಂಚಿತರಾದ ಮಹಾಬಳೇಶ್ವರರಲ್ಲಿ ಮುಂದೆ ಓದುವ ಹಂಬಲವಿತ್ತು. ಅವರು ಕೆಪೆ ಹೋಲಿ ಸ್ಪಿರಿಟ್ ಹೈಸ್ಕೂಲಿನಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಪೊಲೀಸ್ ಪೇದೆಯಾಗಿ ಕೈ ತುಂಬಾ ಸಂಬಳ ಪಡೆಯುತ್ತಿದ್ದರೂ ಪೊಲೀಸ್ ಇಲಾಖೆಯಲ್ಲಿ ಮೂರು ವರ್ಷ ಸೇವೆ ಸಲ್ಲಿಸಿ ಬೇರೆ ನೌಕರಿ ಹುಡುಕಲಾರಂಭಿಸಿದರು.

ಈ ನಡುವೆ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜ್ ಮೂಲಕ ಹೆಸರು ನಮೂದಿಸಿದ್ದಾಗ ಅಂಚೆ ಇಲಾಖೆಯಿಂದ ಕರೆ ಬಂದು ಆಯ್ಕೆಯಾದರು. ಅಂಚೆ ಇಲಾಖೆಯಲ್ಲಿ ಮಾಡಿದ ಮೂವತ್ತಮೂರು ವರ್ಷಗಳ ಸೇವೆಯಲ್ಲಿ ಮೂವತ್ತೊಂದು ವರ್ಷ ಪೋಸ್ಟ್ ಮಾಸ್ಟರಾಗಿ ದುಡಿದು ನಿವೃತ್ತರಾದರು. ಅಂಚೆ ಇಲಾಖೆಯಲ್ಲಿ ಇರುವಾಗ ಟೆಲಿಗ್ರಾಮಿನ ಡ್ರಾಫ್ಟಿಂಗ್ ತರಬೇತಿಗೆ ಇವರನ್ನು ಪುಣೆಗೆ ಕಳಿಸಲಾಯಿತು. ಅಲ್ಲಿ ಇವರು ಒಂದೂವರೆ ವರ್ಷ ಇದ್ದರು. ಅಲ್ಲಿದ್ದಾಗ ಬಿಡುವಿನ ವೇಳೆಯಲ್ಲಿ ನಗರದ ವಾಚನಾಲಯಗಳಲ್ಲಿ ದಿನದ ಆರೇಳು ಗಂಟೆ ಪುಸ್ತಕ ಓದುವುದರಲ್ಲಿ ಕಳೆಯುತ್ತಿದ್ದರು.

ಓದಿನ ಪ್ರೇರಣೆ ಮತ್ತು ಅನುಭವದ ಒತ್ತಡದಿಂದ ತಮ್ಮ ಮೊದಲ ಮರಾಠಿ ಕಥೆ 'ಕೊಂಡಮಾರಾ' ಬರೆದು ಶಿರೀಷ ಪೈ ಅವರು ಸಂಪಾದಕರಾಗಿದ್ದ 'ನವಯುಗ' ಪತ್ರಿಕೆಯ ದೀಪಾವಳಿ ಸಂಚಿಕೆಗೆ ಕಳಿಸಿಕೊಟ್ಟರು. ಅದು ಮಹಾರಾಷ್ಟ್ರದ ಪ್ರಸಿದ್ಧ ಲೇಖಕ ಆಚಾರ್ಯ ಅತ್ರೆಯವರ ನೆನಪಿನ ಸಂಚಿಕೆಯಾಗಿತ್ತು. ಅಲ್ಲಿ ಬಂದಿದ್ದ ನೂರಾರು ಕಥೆಗಳಲ್ಲಿ ಸೈಲ್ ಅವರ ಕಥೆ ಆಯ್ಕೆಯಾಗಿತ್ತು. ಅದುವರೆಗೆ ಮಹಾಬಳೇಶ್ವರ ಸೈಲ್ ಎಂದರೆ ಯಾರು ಎಂಬುದೇ ಮರಾಠಿ ಓದುಗರಿಗೆ ಗೊತ್ತಿರಲಿಲ್ಲ. ಆನಂತರ ಇವರ ಕಥೆಗಳು ಮರಾಠಿಯ ಪ್ರಸಿದ್ಧ ಪತ್ರಿಕೆಗಳಾದ 'ಹಂಸ', 'ಸತ್ಯಕಥಾ', 'ಸ್ವರಾಜ್ಯ', 'ಮಾಣೂಸ'ದಲ್ಲಿ ಪ್ರಕಟಗೊಂಡವು. ಅಲ್ಲಿದ್ದಾಗಲೇ ಇವರು ಬರೆದ ಮೊದಲ ನಾಟಕ 'ನಕೋ ಜಾಳೂ ಮಾಝು ಘರಟಂ' (1974– ನನ್ನ ಗೂಡು ಸುಡಬೇಡಿ) ಪ್ರಕಟವಾಗಿ ರಂಗಭೂಮಿಯಲ್ಲಿ ನೂರಾರು ಪ್ರಯೋಗ ಕಂಡು ಜನಮಾನ್ಯತೆ ಪಡೆಯಿತು. ಅನಂತರ ಇವರು ಮರಾಠಿಯಲ್ಲಿ 'ಚರಿತ್ರಹೀನ', 'ಶರಣಾಗತಿ', 'ಯಾತನಾ ಚಕ್ರ' (1979) ಎಂಬ ಮೂರು ನಾಟಕಗಳನ್ನು ಬರೆದರು. ಅವೂ ರಂಗಭೂಮಿಯಲ್ಲಿ ಯಶಸ್ವಿಯಾಗಿ ಜನಪ್ರಿಯತೆ ತಂದುಕೊಟ್ಟವು. ಅದುವರೆಗೆ ಮಹಾಬಳೇಶ್ವರರಿಗೆ ಕೊಂಕಣಿ ಭಾಷೆಯಲ್ಲಿ ಬರೆಯುವವರಿದ್ದಾರೆ, ಸಾಹಿತ್ಯವಿದೆಯೆಂದು ಗೊತ್ತಿರಲಿಲ್ಲ.

ಇವರು ಪುಣೆಯ ತರಬೇತಿಯನ್ನು ಮುಗಿಸಿ ಕೊಂಡು ಗೋವೆಗೆ ಬರುವಷ್ಟರಲ್ಲಿ ಇವರನ್ನು ಮಾಜೋರ್ಡಾ ಎಂಬ ಹಳ್ಳಿಗೆ ವರ್ಗಾವಣೆ ಮಾಡಲಾಯಿತು (1979). ಅಲ್ಲಿ ಕೊಂಕಣಿಯ ಪ್ರಸಿದ್ಧ ಲೇಖಕ

